**ಪಾಠ–10** **ಫೆಬ್ರವರಿ 29–ಮಾರ್ಚ್ 6**

# ಪಾಪದ ಅರಿಕೆಯಿಂದ ಸಮಾಧಾನದೆಡೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 9ನೇ ಅಧ್ಯಾಯ, ಯೆರೆಮೀಯ 25:11, 12 ಮತ್ತು 29:10 ಮತ್ತು 2 ಅರಸುಗಳು 19:15–19, ಮತ್ತಾಯ 5:16, ಯಾಕೋಬ 5:16.

**ಸ್ಮರಣವಾಕ್ಯ : ಸ್ವಾಮೀ, ಕೇಳು! ಸ್ವಾಮಿ, ಕ್ಷಮಿಸು! ಸ್ವಾಮಿ ಲಾಲಿಸು, ಕಾರ್ಯವನ್ನು ಸಾಧಿಸು! ತಡಮಾಡಬೇಡ! ನನ್ನ ದೇವರೇ, ನಿನ್ನ ಜನವೂ ಪಟ್ಟಣವೂ ನಿನ್ನ ಹೆಸರಿನವುಗಳಾದ ಕಾರಣ ನಿನ್ನ ಹೆಸರನ್ನು ಕಾಪಾಡಿಕೋ! (ದಾನಿಯೇಲ 19:19).**

ದಾನಿಯೇಲ 9ನೇ ಅಧ್ಯಾಯ ಸತ್ಯವೇದದ ಮಹಾಪ್ರಾರ್ಥನೆಗಳಲ್ಲಿ ಒಂದು ಪ್ರಾರ್ಥನೆಯನ್ನು ಒಳಗೊಂಡಿದೆ. ತನ್ನ ಜೀವನದ ಒಂದು ನಿರ್ಣಾಯಕ ಸನ್ನಿವೇಶದಲ್ಲಿ ದಾನಿಯೇಲನು ತನ್ನ ಮುಂದಿರುವ ಸವಾಲುಗಳನ್ನು ನಿಭಾಯಿಸಲು ಪ್ರಾರ್ಥನೆಗೆ ತೊಡಗಿದನು. ರಾಜನಿಗೆ ಬಿದ್ದ ಕನಸಿನ ಅರ್ಥವನ್ನು ದಾನಿಯೇಲನ ಸಹೋದ್ಯೋಗಿಗಳು ಹೇಳಲಾರದೆ ಮರಣಶಿಕ್ಷೆಗೆ ಗುರಿಯಾದಾಗ ದಾನಿಯೇಲನು ಪ್ರಾರ್ಥನೆ ಮಾಡಲು ದೇವರ ಬಳಿಗೆ ಬರುತ್ತಾನೆ (ಧಾವಿಸುತ್ತಾನೆ) (ದಾನಿಯೇಲ 2ನೇ ಅಧ್ಯಾಯ). ರಾಜನಿಗಲ್ಲದೆ ಮತ್ಯಾರಿಗೂ ಪ್ರಾರ್ಥನೆ ಮಾಡಬಾರದೆಂದು ರಾಜನ ಆಜ್ಞೆ ಹೊರತಾಗಲೂ ದಾನಿಯೇಲನು ಯೆರೂಸಲೇಮಿನ ಕಡೆಗೆ ಮುಖ ಮಾಡಿ ಯಥಾಪ್ರಕಾರವಾಗಿ ಪ್ರಾರ್ಥನೆ ಮಾಡುವುದನ್ನು ಮುಂದುವರೆಸಿದನು (ದಾನಿಯೇಲ 6ನೇ ಅಧ್ಯಾಯ). ಹಾಗಾಗಿ, ದಾನಿಯೇಲ 9ನೇ ಅಧ್ಯಾಯದಲ್ಲಿರುವ ಪ್ರಾರ್ಥನೆಯನ್ನು ಪರಿಗಣಿಸಿ ಪ್ರವಾದಿಯಾದ

ದಾನಿಯೇಲನ ಮೇಲೆ ದೊಡ್ಡ ಪರಿಣಾಮ ಬೀರಿದ 8ನೇ ಅಧ್ಯಾಯದಲ್ಲಿರುವ 2300 ಉದಯಾಸ್ತಮಾನಗಳ ಕನಸನ್ನು ನೆನಪಿಸಿಕೊಳ್ಳೋಣ. ಪ್ರವಾದನೆಯ ಆರಂಭ ಮತ್ತು ಅಂತ್ಯವು ಸಮಗ್ರವಾಗಿ ದಾನಿಯೇಲನಿಗೆ ವಿವರಿಸಲ್ಪಟ್ಟಾಗ್ಯೂ, ಇಬ್ಬರು ದೇವದೂತರು ಇವನಿಗೆ–ಉದಯಾಸ್ತಮಾನಗಳ ಎರಡು ಸಾವಿರದ ಮುನ್ನೂರರವರೆಗೆ ನಡೆಯುವವು; ಅನಂತರ ಪವಿತ್ರಾಲಯಕ್ಕೆ ಪುನಃ ನ್ಯಾಯಸ್ಥಾಪನೆಯಾಗುವುದು ಎಂದು ಹೇಳಿದ ಮಾತುಗಳು ದಾನಿಯೇಲನಿಗೆ ಅರ್ಥವಾಗಲಿಲ್ಲ (ದಾನಿ 8:14). 9ನೇ ಅಧ್ಯಾಯದಲ್ಲಿ ತಾನೇ ಪ್ರವಾದಿಗೆ ಹೆಚ್ಚಿನ ಬೆಳಕು ಕೊಡಲ್ಪಟ್ಟಿತು, ಈ ಬೆಳಕು ಆತನು ಶ್ರದ್ಧಾಭಕ್ತಿಯಿಂದ ಮಾಡಿದ ಪ್ರಾರ್ಥನೆಗೆ ಉತ್ತರವಾಗಿ ಕೊಡಲ್ಪಟ್ಟಿತು.

ಈ ವಾರದ ಅಧ್ಯಯನವನ್ನು ಮಾರ್ಚ್ 7ರ ಸಬ್ಬತ್ತಿಗೆ ಸಿದ್ಧಮಾಡಿಕೊಳ್ಳಿರಿ.

**ಭಾನುವಾರ** **ಮಾರ್ಚ್ 1**

## ದೇವರವಾಕ್ಯದ ಪ್ರಾಧಾನ್ಯತೆ

ಓದಿರಿ : ದಾನಿಯೇಲ 9:1,2. ದಾನಿಯೇಲನಾದ ನಾನು ಶಾಸ್ತ್ರಗಳನ್ನು ಪರೀಕ್ಷಿಸಿದೆನು (ಅರ್ಥಮಾಡಿಕೊಂಡೆನು) ಎಂದು ಹೇಳುವಾಗ ಸತ್ಯವೇದದ ಯಾವ ಪುಸ್ತಕವನ್ನು ಕುರಿತು ಹೇಳುತ್ತಾನೆ?

ನಾವು ಆತನು ಮಾಡಿದ ಪ್ರಾರ್ಥನೆಯನ್ನು ಗಮನಿಸಿದಾಗ ದೇವರು ಮೋಶೆ ಮತ್ತು ಪ್ರವಾದಿಗಳಿಗೆ ಪ್ರಕಟಿಸಿದ ವಿಷಯಗಳ ಆಳವಾದ ಅಧ್ಯಯನದ ಜ್ಞಾನದಿಂದ ಆತನಿಗೆ ಸ್ಪಷ್ಟವಾಯಿತು ಎಂದು ಗೊತ್ತಾಗುತ್ತದೆ. ಯೆರೆಮೀಯನ ಗ್ರಂಥ ಓದಿದಾಗ ಸೆರೆ ಒಯ್ಯಲ್ಪಡುವ ಅವಧಿಯು 70 ವರ್ಷಗಳೆಂದು ತಿಳಿಯುತ್ತದೆ (ನೋಡಿರಿ ಯೆರೆ 25:11, 12 ಮತ್ತು 29:10). ದಾನಿಯೇಲನು ತಾನು ಜೀವಿಸುತ್ತಿರುವ ಸಂದರ್ಭವು ಐತಿಹಾಸಿಕವಾಗಿ ಎಷ್ಟು ಪ್ರಾಮುಖ್ಯವಾದದೆಂದು ಅರ್ಥಮಾಡಿಕೊಂಡಿದ್ದನು.

ಬ್ಯಾಬಿಲೋನ್ ರಾಜನು ಪಾರಸೀಯ ರಾಜನಿಂದ ಕ್ರಿ.ಪೂ. 539ರಲ್ಲಿ ಪಲ್ಲಟವಾದಾಗ ದಾನಿಯೇಲನು ಈ ಪ್ರಾರ್ಥನೆಯನ್ನು ಸಲ್ಲಿಸಿದನು. ಹಾಗಾಗಿ, ನೆಬೂಕದ್ನೆಚ್ಚರನು ಯೆರೂಸಲೇಮಿಗೆ ಮುತ್ತಿಗೆ ಹಾಕಿ ಅದನ್ನು ನಾಶಮಾಡಿ

70 ವರ್ಷಗಳು ಕಳೆದಿದ್ದವು. ಆದುದರಿಂದ ಯೆರೆಮೀಯನ ಪ್ರವಾದನೆಯ ಪ್ರಕಾರ ದೇವಜನರಾದ ಇಸ್ರಾಯೇಲ್ಯರು ತಮ್ಮ ಸ್ವಂತ ದೇಶಕ್ಕೆ ಬೇಗನೆ ಹಿಂದಿರುಗುವುದಕ್ಕಿದ್ದರು. ದೇವರ ವಾಕ್ಯದ ಮೇಲೆ ಭರವಸೆಯಿಡುವುದೆಂದರೆ ಎಷ್ಟು ಮಹತ್ವವಾದದೆಂದು ದಾನಿಯೇಲನಿಗೆ ತಿಳಿದಿತ್ತು. ಜನರು ದೇವರ ವಾಗ್ದಾನದಂತೆ ಹಿಂದಿರುಗಿ ಬರಬೇಕಾಗಿತ್ತು. ದಾನಿಯೇಲನು ತನಗೆ ಸಿಕ್ಕ ಯೆರೇಮೀಯನ ಗ್ರಂಥದ ಅಧ್ಯಯನದಿಂದ ಜನರ ಪಾಪವು ಎಷ್ಟು ಗಂಭೀರವಾದುದು ಎಂಬುದೂ ಸಹ ಮನವರಿಕೆಯಾಯ್ತು. ದೇವರ ಒಡಂಬಡಿಕೆಯನ್ನು ಮುರಿದದರಿಂದ ದೇವರೊಂದಿಗಿನ ಸಂಬಂಧವೂ ಮುರಿದು ಹೋಯ್ತು.

ಇದರ ಅನಿವಾರ್ಯವಾದ (ತಪ್ಪಿಸಲಾಗದ) ಪರಿಣಾಮವೇ ಸೆರೆ ಒಯ್ಯಲ್ಪಡುವುದು (ಯಾಜಕಕಾಂಡ 26:14–45). ಹಾಗಾಗಿ, ದೇವರವಾಕ್ಯದಲ್ಲಿ ದೇವರ ಪ್ರಕಟನೆಗಳನ್ನು ಅಭ್ಯಾಸ ಮಾಡಿದಾಗ ದಾನಿಯೇಲನಿಗೆ ಕಾಲಗಳ ವಿಷಯದಲ್ಲಿ ತಿಳುವಳಿಕೆಯಾಯ್ತು. ಅದು ತನ್ನ ಜನರಿಗೋಸ್ಕರ ಬೇಡುವ ತುರ್ತಿನ ಅರಿವನ್ನು ಉಂಟುಮಾಡಿತು.

ನಾವು ಈ ಭೂಮಿಯ ಚರಿತ್ರೆಯ ಅಂತ್ಯದಿನಗಳನ್ನು ಸಂಧಿಸುತ್ತಿರುವಾಗ ದೇವರ ವಾಕ್ಯಾನುಸಾರವಾಗಿ ಜೀವಿಸಬೇಕೆಂದರೆ ಆ ವಾಕ್ಯಗಳನ್ನು ಎಂದಿಗಿಂತಲೂ ಚೆನ್ನಾಗಿ ಅಧ್ಯಯನ ಮಾಡಬೇಕಾಗಿದೆ. ನಾವು ಜೀವಿಸುವ ಈ ಲೋಕದ ಅಧಿಕೃತವಾದ ವಿವರಣೆಯನ್ನು ದೇವರ ವಾಕ್ಯದಿಂದ ಮಾತ್ರ ಪಡೆಯಲು ಸಾಧ್ಯ. ದೇವರವಾಕ್ಯವು ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ನಡೆಯುತ್ತಿರುವ ಸಂಘರ್ಷದ ಕಥೆಯನ್ನು ಹೇಳುತ್ತದೆ ಮತ್ತು ಮಾನವನ ಚರಿತ್ರೆಯು ಕೆಟ್ಟದರ ನಾಶನದೊಂದಿಗೆ ಮತ್ತು ದೇವರ ಶಾಶ್ವತ ರಾಜ್ಯದ ಸ್ಥಾಪನೆಯೊಂದಿಗೆ ಅಂತ್ಯಗೊಳ್ಳುತ್ತದೆ. ದೇವರ ವಾಕ್ಯವನ್ನು ಹೆಚ್ಚಾಗಿ ಅಭ್ಯಾಸ ಮಾಡುವಾಗ ನಮಗೆ ಏನನ್ನೂ ಕೊಡಲಾರದ ನಾವಿರುವ ಈ ಲೋಕದ ಸಮಕಾಲೀನ ಸನ್ನಿವೇಶಗಳನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಅರ್ಥವೇ ಇಲ್ಲವೆಂದಿಸುವ ಈ ಲೋಕದ ಬಗ್ಗೆ ಸ್ವಲ್ಪ ಮಟ್ಟಿಗೆ ಅರ್ಥ ಮಾಡಿಕೊಳ್ಳಲು ಸತ್ಯವೇದವು (ಬೈಬಲ್) ಹೇಗೆ ನಮಗೆ ಸಹಾಯಮಾಡುತ್ತದೆ?

**ಸೋಮವಾರ** **ಮಾರ್ಚ್ 2**

# ಕೃಪೆಗಾಗಿ ಬೇಡುವುದು

ಓದಿರಿ ದಾನಿಯೇಲ 9:3–19. ಯಾವ ಆಧಾರದ ಮೇಲೆ ದಾನಿಯೇಲನು ದೇವರ ಕರುಣೆಗಾಗಿ ಮೊರೆ ಇಡುತ್ತಾನೆ?

ಈ ಪ್ರಾರ್ಥನೆಯಲ್ಲಿ ವಿಶೇಷವಾಗಿ ಕೆಲವು ಅಂಶಗಳನ್ನು ನಾವು ಗಮನಿಸಬೇಕು.

ಯೆಹೂದ್ಯರಿಗೆ ಸಂಭವಿಸಿದ ಆಪತ್ತುಗಳಿಗೆ ದಾನಿಯೇಲನು ತನ್ನ ಪ್ರಾರ್ಥನೆಯಲ್ಲಿ ಯಾವ ತರದ ವಿವರಣೆಯನ್ನೂ ಕೇಳಿಲ್ಲ. ಯಾಕೆಂದರೆ ಅವನಿಗೆ ಕಾರಣವೇನೆಂಬುದು ಗೊತ್ತಾಗಿತ್ತು. ನಿಜವಾಗಿ ದಾನಿಯೇಲನು ಮಾಡುವ ದೊಡ್ಡ ಪ್ರಾರ್ಥನೆಯಲ್ಲಿ ಆತನೇ ಮಾಡಿರುವ ವರ್ಣನೆಯಿಂದ ಕಾರಣವೇನು ಎಂದು ತಿಳಿಯುತ್ತದೆ. "ಕರ್ತನಾದ ನಮ್ಮ ದೇವರ ಮಾತನ್ನು ಕೇಳಲಿಲ್ಲ. ತನ್ನ ಸೇವಕರಾದ ಪ್ರವಾದಿಗಳ ಮೂಲಕ ನಮಗೆ ಗೊತ್ತು ಮಾಡಿದ ಧರ್ಮಮಾರ್ಗದಲ್ಲಿ ನಡೆಯಲಿಲ್ಲ (ದಾನಿ 9:10). ನಾವು ದಾನಿಯೇಲನನ್ನು ಕೊನೆಯ ಬಾರಿಗೆ ಆತನು 8ನೇ ಅಧ್ಯಾಯದ ಅಂತ್ಯವನ್ನು ಅರ್ಥಮಾಡಿಕೊಳ್ಳುವ ಅಗತ್ಯವಿರುವಾಗ ಸಂಧಿಸಿದ್ದೆವು. ಆವಾಗ 2300 ಉದಯಾಸ್ತಮಾನಗಳ ಕನಸಿನ ಅರ್ಥ ತನಗೆ ಆಗಲಿಲ್ಲವೆಂದು ಹೇಳುತ್ತಾನೆ (ದಾನಿ 8:27ನ್ನು ನೋಡಿರಿ). ಈ ಪ್ರಾರ್ಥನೆಯ ಎರಡನೇ ಅಂಶವೇನೆಂದರೆ ದಾನಿಯೇಲನು ದೇವರ ಕೃಪೆಗಾಗಿ ಮತ್ತು ತನ್ನ ಜನರ ಕೆಟ್ಟದ್ದನ್ನು ಮಾಡಿ ಪಾಪಮಾಡಿದಾಗ್ಯೂ ಅವರನ್ನು ಕ್ಷಮಿಸುವ ದೇವರ ಸಮ್ಮತಿಗಾಗಿ ಬೇಡುತ್ತಾನೆ. ಒಂದು ರೀತಿಯಲ್ಲಿ ಸುವಾರ್ತೆಯ ಬಲಯುತವಾದ ನಿದರ್ಶನವನ್ನು ನಾವು ಇಲ್ಲಿ ಕಾಣುತ್ತೇವೆ. ಪಾಪಿಜನರಿಗೆ ಯಾವ ಪುಣ್ಯವಿಲ್ಲದಿದ್ದರೂ ತಾವು ಹೊಂದಿಕೊಂಡ ಕ್ಷಮಾಪಣೆಗೆ ಯಾವ ಆದ್ಯತೆಯಿಲ್ಲದಿದ್ದರೂ ದೇವರ ಕೃಪೆಯನ್ನು ಬೇಡುವುದೇ ಸುವಾರ್ತೆಯಾಗಿದೆ. ನಾನು ವೈಯಕ್ತಿಕವಾಗಿ ದೇವರ ಮುಂದೆ ಇದಕ್ಕೆ ಉದಾಹರಣೆಯಾಗಿದ್ದೇವೆ ಅಲ್ಲವೆ?

ಓದಿರಿ : ದಾನಿಯೇಲ 9:18,19. ದೇವರು ತನ್ನ ಪ್ರಾರ್ಥನೆಗೆ ಉತ್ತರಿಸಬೇಕೆಂದು ಬೇರೆ ಯಾವ ಕಾರಣವನ್ನು ದಾನಿಯೇಲನು ಕೊಡುತ್ತಾನೆ?

ಎತ್ತಿ ಹೇಳಬೇಕಾದ ಮತ್ತೊಂದು ಅಂಶವು ದಾನಿಯೇಲನ ಪ್ರಾರ್ಥನೆಯಲ್ಲಿದೆ. ಏನೆಂದರೆ ದೇವರ ಹೆಸರಿನ ಘನತೆಗಾಗಿ ಬೇಡುವುದು. ಏನೆಂದರೆ ಪ್ರಾರ್ಥನೆಯು ದಾನಿಯೇಲನ ವೈಯಕ್ತಿಕ ಅನುಕೂಲಕ್ಕಾಗಲೀ ಜನರ ಅನುಕೂಲಕ್ಕಾಗಲೀ ಪ್ರೇರೇಪಿಸಲ್ಪಡದೇ ದೇವರ ಸಲುವಾಗಿ ಪ್ರೇರೇಪಿಸಲ್ಪಟ್ಟಿದೆ (ದಾನಿ 9:17–19). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದೇವರ ನಾಮದ ಘನತೆಗಾಗಿ ಈ ಮನವಿಯನ್ನು ಮಾಡುತ್ತಾನೆ.

2 ಅರಸು 19:15–19ನ್ನು ಓದಿರಿ. ಯಾವ ರೀತಿಯಲ್ಲಿ ಯೆಹೆಜ್ಕೇಲನ ಪ್ರಾರ್ಥನೆಯು ದಾನಿಯೇಲನ ಪ್ರಾರ್ಥನೆಯನ್ನು ಹೋಲುತ್ತದೆ? ನಾವು ಕೂಡ ದೇವರನ್ನು ಮಹಿಮೆ ಪಡಿಸಬಹುದೆಂಬುದಕ್ಕೆ ಮತ್ತಾಯ 5:16 ಏನು ಹೇಳುತ್ತದೆ?

**ಮಂಗಳವಾರ** **ಮಾರ್ಚ್ 3**

## ಮಧ್ಯಸ್ಥಿಕೆಯ ಮೌಲ್ಯ (ಬೆಲೆ)

**ಓದಿರಿ : ದಾನಿಯೇಲ 8:5–13. ದಾನಿಯೇಲನು "ನಾವು" ಪಾಪಾಪರಾಧಗಳನ್ನು ಮಾಡಿದ್ದೇವೆ ಎಂದು ಹೇಳುತ್ತಾ ಇರುತ್ತಾನೆ. ಅಂತಿಮವಾಗಿ ದೇಶಕ್ಕೆ ವಿಪತ್ತು ತಂದ ಈ ಪಾಪಗಳಿಗೆ ತನ್ನನ್ನು ಸಹಾ ಸೇರಿಸಿಕೊಳ್ಳುವುದರ ಮಹತ್ವವೇನು?**

ಸತ್ಯವೇದದಲ್ಲಿರುವ ಮಧ್ಯಸ್ಥಿಕೆ ಪ್ರಾರ್ಥನೆಗಳಲ್ಲಿ ದಾನಿಯೇಲನ ಪ್ರಾರ್ಥನೆಯೂ ಸಹಾ ಒಂದು. ಅಂತಹ ಪ್ರಾರ್ಥನೆಗಳು ದೇವರ ಹೃದಯವನ್ನೇ ಮುಟ್ಟುತ್ತವೆ. ನ್ಯಾಯತೀರ್ಪನ್ನು (ಶಿಕ್ಷೆಯನ್ನು) ತಪ್ಪಿಸಿ ಶತ್ರುಗಳಿಂದ ಬಿಡುಗಡೆಯನ್ನು ಕೊಡುವಂತೆ ಮಾಡುತ್ತವೆ. ದೇವರು ಇಡೀ ಇಸ್ರಾಯೇಲ್ ಜನಾಂಗವನ್ನೇ ನಾಶಮಾಡಲು ಹೊರಟಾಗ ಮೋಶೆಯ ಮಧ್ಯಸ್ಥಿಕೆ ದೇವರನ್ನು ತಡೆಯುತ್ತದೆ (ವಿ.ಕಾಂಡ 32:7–14, ಅ.ಕಾಂಡ 14:10–25). ಘೋರದಿಂದ ಬರದಿಂದ (ಇಸ್ರಾಯೇಲ್ ದೇಶವು ತತ್ತರಿಸಿ ಹೋದಾಗ ದೇವರು ಎಲೀಯನ) ಪ್ರಾರ್ಥನೆಯನ್ನು ಲಾಲಿಸಿ ದೇಶಕ್ಕೆ ಮಳೆಗರೆದು ಜನರ ಪ್ರಾಣವನ್ನು ಉಳಿಸಿದನು (1 ಅರಸು 18ನೇ ಅಧ್ಯಾಯ).

ನಾವು ನಮ್ಮ ಕುಟುಂಬದ ಸದಸ್ಯರಿಗೆ, ಸ್ನೇಹಿತರಿಗೆ, ಇತರೆ ಜನಗಳಿಗೆ ಅಥವಾ ಸನ್ನಿವೇಶಗಳಿಗೋಸ್ಕರ ಪ್ರಾರ್ಥನೆ ಮಾಡುವಾಗ ದೇವರು ನಮ್ಮ

ಮಧ್ಯ ಪ್ರವೇಶಿಸುತ್ತಾನೆ. ಒಮ್ಮೊಮ್ಮೆ ನಮ್ಮ ಪ್ರಾರ್ಥನೆಗೆ ಬಹಳ ತಡವಾಗಿ ಉತ್ತರ ಸಿಗಬಹುದು. ಆದರೆ ದೇವರು ತನ್ನ ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ಮರೆಯುವುದಿಲ್ಲವಾದ್ದರಿಂದ ನಾವು ಆತನಲ್ಲಿ ಭರವಸವಿಡಬಹುದು.

ಈ ಒಂದು ಪ್ರಕರಣದಲ್ಲಿ ದಾನಿಯೇಲನು ಇಸ್ರಾಯೇಲಿನ ಮತ್ತು ದೇವರ ನಡುವೆ ಮಧ್ಯಸ್ಥಿಕೆಯ ಪಾತ್ರವನ್ನು ವಹಿಸುತ್ತಾನೆ. ಆತನು ದೇವರವಾಕ್ಯವನ್ನು ಓದಿದಾಗ ದೇವರ ಎಚ್ಚರಿಕೆಯನ್ನು ಗಮನಿಸದೆ ಆತನ ಆಜ್ಞೆಗಳನ್ನು ಮೀರಿದಾಗ ಜನರು ಎಂಥಾ ಪಾಪಿಗಳಾಗುತ್ತಾರೆಂದು ದಾನಿಯೇಲನಿಗೆ ಮನವರಿಕೆಯಾಯ್ತು. ಹಾಗಾಗಿ ದಾನಿಯೇಲನು ಜನರ ಆಧ್ಯಾತ್ಮಿಕ ಕೊರತೆಯ ಪರಿಸ್ಥಿತಿಯನ್ನು ತಿಳಿದವನಾಗಿ ಸ್ವಸ್ಥತೆಗಾಗಿ ಮತ್ತು ಕ್ಷಮಾಪಣೆಗಾಗಿ ಪ್ರಾರ್ಥಿಸುತ್ತಾನೆ. ಆದರೆ ಪ್ರವಾದಿಯು ತನ್ನನ್ನು ಜನರೊಟ್ಟಿಗೆ ಗುರುತಿಸಿಕೊಳ್ಳುತ್ತಾನೆ. ಕೆಲವು ಅಂಶಗಳಲ್ಲಿ ದಾನಿಯೇಲನ ನಿದರ್ಶನವು ಯೇಸು ನಮ್ಮ ಮಧ್ಯಸ್ಥನ ಪಾತ್ರವನ್ನು ವಹಿಸಿದ್ದನ್ನು ನೆನಪಿಸುತ್ತದೆ (ಯೋಹಾನ 17ನೇ ಅಧ್ಯಾಯ). ಆದರೂ ಇದರಲ್ಲಿ ದೊಡ್ಡ ವ್ಯತ್ಯಾಸವಿದೆ. ಏನೆಂದರೆ ಕ್ರಿಸ್ತನು ಪಾಪರಹಿತನೂ (ಇಬ್ರಿಯ 4:15). ಆದುದರಿಂದ ಕ್ರಿಸ್ತನು ತನ್ನ ಪಾಪಗಳನ್ನು ಅರಿಕೆ ಮಾಡಿಕೊಳ್ಳುವ ಅಗತ್ಯವಿರಲಿಲ್ಲ (ಇಬ್ರಿಯ 7:26, 27). ಆದರೆ ಆತನು ವಿಶಿಷ್ಟ ರೀತಿಯಲ್ಲಿ ತನ್ನನ್ನು ಪಾಪಿಗಳೊಂದಿಗೆ ಗುರುತಿಸಿಕೊಂಡನು: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗಿ ಮಾಡಿದನು" (2 ಕೊರಿಂಥ 5:21).

ಮನುಷ್ಯನಲ್ಲಿರುವ ಎಲ್ಲಾ ಒಳ್ಳೆಯದನ್ನು ಪರಿಶುದ್ಧವಾದದು ಹಾಗೂ ಶ್ರೇಷ್ಠತೆಯನ್ನೂ ಸುಂದರವಾದದನ್ನೂ ಒಟ್ಟಾಗಿ ಆತನ ರಕ್ಷಣೆಗಾಗಿ ಅರ್ಹತೆ ಎಂಬಂತೆ ದೇವರ ಮುಂದೆ ಮಂಡಿಸಿದರೆ ಈ ಪ್ರಸ್ತಾವನೆಯು ಕೇವಲ ಪಿತೂರಿಯಾಗಿ ನಿರಾಕರಿಸಲ್ಪಡುತ್ತದೆ. ಎಲೆನ್ ಜಿ ವೈಟಮ್ಮನವರ ಫೇತ್ ಅಂಡ್ ವರ್ಕ್ಸ್ ಪುಟ 24. ನಮ್ಮ ಪರವಾಗಿ ಮಧ್ಯಸ್ಥನು ಅಗತ್ಯವಾಗಿರುವ ವಿಷಯದಲ್ಲಿ ಈ ವಾಕ್ಯಗಳು ನಮಗೆ ಏನನ್ನು ಬೋಧಿಸುತ್ತವೆ?

# ಮೆಸ್ಸೀಯನ ಕೆಲಸ

ದಾನಿಯೇಲನು ಜನರ ಪರವಾಗಿ ಮಧ್ಯಸ್ಥನಾಗಿ ಮಾಡುವ ಪ್ರಾರ್ಥನೆಯು ಮುಖ್ಯವಾದ ಎರಡು ಕಾಳಜಿಗಳನ್ನು ಸಂಬೋಧಿಸುತ್ತದೆ. ಒಂದು ಜನರ ಪಾಪ ಮತ್ತೊಂದು ಯೆರೂಸಲೇಮಿನ ಹಾಳು ಸ್ಥಿತಿ. ಹಾಗಾಗಿ ದೇವರ ಪ್ರತಿಕ್ರಿಯೆಯು ಈ ಎರಡು ಮನವಿಗಳನ್ನು ಕುರಿತಾಗಿದೆ. ಮೆಸ್ಸೀಯನ ಕಾರ್ಯದಿಂದ ಜನರು ವಿಮೋಚಿಸಲ್ಪಟ್ಟು ದೇವದರ್ಶನ ಗುಡಾರವು ಅಭಿಷೇಕಿಸಲ್ಪಡುತ್ತದೆ. ದಾನಿಯೇಲನ ತತ್‌ಕ್ಷಣದ ಚಾರಿತ್ರಿಕ ಕ್ಷಿತಿಜವು ದಾಟಿಹೋಗುವಂತೆ ಅವನ ಎರಡೂ ಮನವಿಗಳಿಗೆ ಉತ್ತರ ದೊರಕಿದೆ. ಮೆಸ್ಸೀಯನ ಕೆಲಸವು ಇಡೀ ಮಾನವ ಜನಾಂಗಕ್ಕೆ ಪ್ರಯೋಜನವನ್ನು ತರುವಂಥದ್ದಾಗಿದೆ.

ಓದಿರಿ : ದಾನಿಯೇಲ 9:21–27. ಇಲ್ಲಿ 70 ವಾರಗಳೊಳಗೆ ಯಾವ ಕೆಲಸವು ನಡೆಯಬೇಕಾಗಿದೆ? ಇದನ್ನು ಕ್ರಿಸ್ತನು ಮಾತ್ರ ಪೂರೈಸುತ್ತಾನೆ, ಯಾಕೆ?

1. **"ಉಲ್ಲಂಘನೆಯನ್ನು ಮುಕ್ತಾಯ ಮಾಡುವುದು"**: ಉಲ್ಲಂಘನೆ ಎಂಬ ಪದಕ್ಕೆ "ಪ್ರೆಶ" ಎಂಬ ಇಬ್ರಿಯ ಪದವು ಕೀಳಾದುದು ಶ್ರೇಷ್ಠವಾದುದನ್ನು ಮನಃ ಪೂರ್ವಕವಾಗಿ ಮೀರುವುದನ್ನು ಸೂಚಿಸುತ್ತದೆ (ಉದಾಹರಣೆಗೆ ಜ್ಞಾನೋಕ್ತಿಗಳು 28:24). ಜನರು ದೇವರಿಗೆ ನೇರವಾಗಿ ವಿರೋಧತೆಯನ್ನು ವ್ಯಕ್ತಪಡಿಸುವ ಪದವು ಸತ್ಯವೇದದಲ್ಲಿ ಸಿಗುತ್ತದೆ (ಯೆಹೆ 2:3). ಯೇಸುಕ್ರಿಸ್ತನ ರಕ್ತದ ಮೂಲಕ ದೇವರಿಗೆ ಎದುರು ಬೀಳುವನನ್ನು ನಿರರ್ಥಗೊಳಿಸಿ ಕಲ್ವಾರಿಯಿಂದ ಹರಿದು ಬರುವ ಶ್ರೇಷ್ಠತೆಯುನ್ನು ಮಾನವರಿಗೆ ಕೊಡಲಾಗುತ್ತದೆ.
2. **ಪಾಪಗಳಿಗೆ ಮುಕ್ತಾಯ ಮಾಡುವುದು (ಕೊನೆಗೊಳಿಸುವುದು):** ಕೊನೆಗಾಣಿಸು ಎಂಬುದು ಕ್ರಿಯಾಪದವಾಗಿದ್ದು, ಮುಚ್ಚು ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿ ಪಾಪವು ಕ್ಷಮಿಸಲ್ಪಟ್ಟಿದೆ ಎಂಬ ಅರ್ಥ ಕೊಡುತ್ತದೆ. ಮನುಷ್ಯನು ಪಾಪದಲ್ಲಿ ಬಿದ್ದಾಗಿನಿಂದ ದೇವರ ನೀತಿ ಪ್ರಮಾಣದ ಮಟ್ಟಕ್ಕೆ ಜೀವಿಸಲಾರದವನಾಗಿದ್ದಾನೆ. ಆದರೆ ಮೆಸ್ಸೀಯನು ನಮ್ಮ ವೈಫಲ್ಯಗಳ ವಿಷಯದಲ್ಲಿ ಚಿಂತಿಸುವವನಾಗಿದ್ದಾನೆ.

3. "ನಮ್ಮ ಅಪರಾಧಗಳಿಗೆ ಮರುಸಂಧಾನ ಮಾಡುವವನಾಗಿದ್ದಾನೆ". ದೇವರಲ್ಲಿಯೇ ಪರಿಪೂರ್ಣತೆ ವಾಸಿಸುತ್ತದೆ. ಕೊಲಸ್ಸ 1:19,20. ಇದನ್ನೂ ಸಹಾ ಯೇಸುಕ್ರಿಸ್ತನೇ ವಾಸ್ತವವಾಗಿ ಘಟಿಸುವಂತೆ ಮಾಡುತ್ತಾನೆ.

4. ನಾವು ಶಾಶ್ವತ ನೀತಿಯನ್ನು ಹೊಂದಿಕೊಳ್ಳುವಂತೆ ಶಿಕ್ಷಾರ್ಹವಾದ ನಮ್ಮ ಸ್ಥಾನದಲ್ಲಿ ತನ್ನನ್ನು ಇರಿಸಿಕೊಂಡು ಶಿಲುಬೆಯ ಮರಣ ಹೊಂದಿ ದೇವರೊಂದಿಗೆ ನಮ್ಮ ಸಂಬಂಧ ಸರಿಯಾಗುವಂತೆ ಭಾಗ್ಯಕರ ಪರಿಸ್ಥಿತಿಯನ್ನು ನಮಗೆ ದಯಪಾಲಿಸಿದ್ದಾನೆ. ನಂಬಿಕೆಯಿಂದ ಮಾತ್ರ ನಾವು ದೇವರಿಂದ ಬರುವ ನೀತಿಯನ್ನು ಹೊಂದಿಕೊಳ್ಳಬಹುದಾಗಿದೆ.

5. "ಕನಸು ಮತ್ತು ಪ್ರವಾದನೆಯನ್ನು ಮುಚ್ಚಿ ಮುದ್ರೆ ಹಾಕುವುದು" ಎಂದರೆ ಯೇಸುಕ್ರಿಸ್ತನ ದೋಷಪರಿಹಾರ ಯಜ್ಞವನ್ನು ಸೂಚಿಸುವ ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸುವುದನ್ನು ಅರ್ಥೈಸುತ್ತದೆ.

6. "ಮಹಾಪರಿಶುದ್ಧನನ್ನು ಅಭಿಷೇಕಿಸುವುದು" ಇಲ್ಲಿ ಹೇಳಿರುವ ಮಹಾಪರಿಶುದ್ಧನು ಎಂಬುದು ವ್ಯಕ್ತಿಯನ್ನು ಸೂಚಿಸದೆ ಸ್ಥಳವನ್ನು ಸೂಚಿಸುತ್ತದೆ. ಹಾಗಾಗಿ ಈ ಹೇಳಿಕೆಯು ಪರಲೋಕದ ದೇವದರ್ಶನ ಗುಡಾರದ ಅಭಿಷೇಕವನ್ನು ಕ್ರಿಸ್ತನು ಮಹಾಯಾಜಕನಾಗಿ ಆರಂಭಿಸುವುದನ್ನು ಕುರಿತು ಹೇಳುತ್ತದೆ.

**ಗುರುವಾರ** **ಮಾರ್ಚ್ 5**

## ಪ್ರವಾದನೆಯ ಕಾಲಮಾನ

2300 ಉದಯಾಸ್ತಮಾನಗಳ ಕನಸು ಅಂತ್ಯವಾದಾಗ ಇದರ ಅರ್ಥ ತಿಳಿಯದೆ ದಾನಿಯೇಲನು ಆಶ್ಚರ್ಯಚಕಿತನಾದನು (ದಾನಿ 8:27). ಹತ್ತು ವರ್ಷಗಳು ಕಳೆದ ಬಳಿಕ ಗಬ್ರಿಯೇಲನು ದಾನಿಯೇಲನಿಗೆ ಸಹಾಯ ಮಾಡಲು ಬಂದನು (ದಾನಿ 9:23). ನಂತರದಲ್ಲಿ ಆದ ಈ ಪ್ರಕಟನೆಯು 70 ವಾರಗಳು ಮುಗಿದ ಮೇಲೆ ಮೆಸ್ಸೀಯನು ನೆರವೇರಿಸುವ ಕೆಲಸವನ್ನು ಪ್ರಕಟಿಸುತ್ತದೆ. ಒಂದು ದಿನಕ್ಕೆ ಒಂದು ವರ್ಷ ಎಂಬ ಲೆಕ್ಕಾಚಾರದ ಪ್ರಕಾರ 70 ವಾರಗಳನ್ನು 490 ವರ್ಷಗಳೆಂದು ಪರಿಗಣಿಸಬೇಕು. ಈ ಅವಧಿಯ ಆರಂಭವು

ಯೆರೂಸಲೇಮನ್ನು ಪುನರ್‌ನಿರ್ಮಿಸಲು ಮತ್ತು ಪುನರ್‌ಸ್ಥಾಪಿಸಲು ಹೊರಡಿಸಿದ ಆದೇಶದ ದಿವಸವಾಗಿದೆ (ದಾನಿ 9:25). ಕ್ರಿ.ಪೂ. 4570ರಲ್ಲಿ ಈ ಆದೇಶವನ್ನು ಅರಸನಾದ ಅರ್ತಶಸ್ತನು ಹೊರಡಿಸಿದನು. ಎಜ್ರನು ನಾಯಕತ್ವದಲ್ಲಿ ಯೆಹೂದ್ಯರು ಯೆರೂಸಲೇಮನ್ನು ಪುನರ್ ನಿರ್ಮಿಸಲು ಈ ಆದೇಶವು ಅನುವು ಮಾಡಿಕೊಟ್ಟಿತು (ಎಜ್ರ 7ನೇ ಅಧ್ಯಾಯ) ಸತ್ಯವೇದದ ವಚನದ ಪ್ರಕಾರ 70 ವಾರಗಳು ನಿರ್ಧರಿಸಲ್ಪಟ್ಟಿವೆ ಅಥವಾ ಕತ್ತರಿಸಿ ತೆಗೆದುಹಾಕಲ್ಪಟ್ಟಿದೆ. 490 ವರ್ಷಗಳ ಕಾಲಾವಧಿಯನ್ನು 2300 ವರ್ಷಗಳ ದೀರ್ಘಾವಧಿಯಲ್ಲಿ ತೆಗೆದು ಹಾಕಲ್ಪಟ್ಟಿದೆ. 2300 ವರ್ಷಗಳ ಮತ್ತು 490 ವರ್ಷಗಳ ಆರಂಭವು ಒಂದೇ ಆಗಿದ್ದು, ಅದು ಕ್ರಿ.ಪೂ. 457 ಎಂದು ಗುರುತಿಸಲ್ಪಟ್ಟಿದೆ.

70 ವಾರಗಳ ಪ್ರವಾದನೆಯು 7 ವಾರಗಳು, 62 ವಾರಗಳು ಮತ್ತು 70ನೇ ವಾರವೆಂದು ಮೂರು ವಿಭಾಗಗಳಾಗಿ ಮಾಡಲ್ಪಟ್ಟಿದೆ. 7 ವಾರಗಳು ಯೆರೂಸಲೇಮನ್ನು ಪುನರ್‌ನಿರ್ಮಿಸಿದ ಕಾಲವನ್ನು ಕುರಿತು ಹೇಳುತ್ತದೆ.

ಏಳುವಾರಗಳು ಕಳೆದ ಮೇಲೆ ಮೆಸ್ಸೀಯ ಪ್ರಭುವಿನೆಡೆಗೆ ನಡೆಸುವ 62 ವಾರಗಳು 62 x7 = 434 ವರ್ಷಗಳು (ದಾನಿ 9:25). ಹಾಗಾಗಿ ಅರ್ತಷಸ್ತನು ಆದೇಶ ಹೊರಡಿಸಿದ ವರುಷದಿಂದ 483 ವರುಷಗಳು ತುಂಬಿದಾಗ ಕ್ರಿ.ಶ. 27ನೇ ವರ್ಷವನ್ನು ಮುಟ್ಟುತ್ತದೆ. ಕ್ರಿಸ್ತನು ಆ ವರುಷದಲ್ಲಿ ದೀಕ್ಷಾಸ್ನಾನ ಹೊಂದಿ ದೈವಕಾರ್ಯಕ್ಕೆ ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟನು.

70ನೇ ವಾರದಲ್ಲಿ ಇನ್ನುಳಿದ ಪ್ರಮುಖ ಘಟನೆಗಳು ಜರುಗುತ್ತವೆ: (1) "ಅಭಿಷಿಕ್ತನು ಛೇದಿಸಲ್ಪಡುತ್ತಾನೆ" (ದಾನಿ 9:26) ಎಂಬುದು ಯೇಸುಕ್ರಿಸ್ತನ ಮರಣವನ್ನು ಉಲ್ಲೇಖಿಸುತ್ತದೆ (2) ಆ ಪ್ರಭುವು ಒಂದು ವಾರದ ಮಟ್ಟಿಗೆ ಬಹುಜನರೊಂದಿಗೆ ದೃಢವಾದ ಒಡಂಬಡಿಕೆಯನ್ನು ಮಾಡಿಕೊಳ್ಳುವನು (ದಾನಿ 9:27) ಎಂಬುದು ಯೇಸುಕ್ರಿಸ್ತನು ಮತ್ತು ಅಪೋಸ್ತಲರು ಇಸ್ರಾಯೇಲ್ಯರ ಜನಾಂಗಕ್ಕೆ ಮಾಡುವ ವಿಶೇಷವಾದ ದೈವಕಾರ್ಯವನ್ನು ಉಲ್ಲೇಖಿಸುತ್ತದೆ. ಇದು ಕಡೆಯ ವಾರದಲ್ಲಿ (70ನೇ ವಾರದಲ್ಲಿ) ಕ್ರಿ.ಶ. 27 ರಿಂದ ಕ್ರಿ.ಶ. 34ರವರೆಗೆ ನಡೆಯುತ್ತದೆ. (3) ಆದರೆ ವಾರದ ಮಧ್ಯದಲ್ಲಿ (ಅರ್ಧವಾರ

ಆದಮೇಲೆ) ಅರ್ಧವಾರ ಯಜ್ಞನೈವೇದ್ಯಗಳನ್ನು ನಿಲ್ಲಿಸುವನು (ದಾನಿ 9:27) ತಾನು ದೀಕ್ಷಾಸ್ನಾನ ಹೊಂದಿ ಮೂರೂವರೆ ವರ್ಷಗಳು ಕಳೆದ ಮೇಲೆ ಇನ್ನಾವ ಬಲಿಯ ಅಗತ್ಯವಿಲ್ಲದಂತೆ ತನ್ನನ್ನೇ ತಾನು ಪರಿಪೂರ್ಣವಾದ ಯಜ್ಞವನ್ನಾಗಿ ಅರ್ಪಿಸಿಕೊಂಡು ಯಜ್ಞನೈವೇದ್ಯಗಳ ವ್ಯವಸ್ಥೆಗೆ ಅಂತ್ಯ ತಂದನು. 70 ವಾರಗಳ ಪ್ರವಾದನೆಯ ಅಂತಿಮ ವಾರವು ಕ್ರಿ.ಶ. 34ನೇ ವರ್ಷಕ್ಕೆ ಮುಗಿಯುತ್ತದೆ. ಆ ವರ್ಷದಲ್ಲಿ ಸ್ತೆಫನನು ಕೊಲ್ಲಲ್ಪಟ್ಟು ರಕ್ತಸಾಕ್ಷಿಯಾದನು. ಆಮೇಲೆ ಸುವಾರ್ತೆಯು ಯೆಹೂದ್ಯರಿಗೆ ಮಾತ್ರವಲ್ಲ ಅನ್ಯರಿಗೂ ಸಹಾ ತಲುಪಿತು.

ದಾನಿಯೇಲ 9:24–27ನ್ನು ಓದಿರಿ. ಮಹಾನಿರೀಕ್ಷೆ ಮತ್ತು ಮೆಸ್ಸೀಯನ ವಾಗ್ದಾನದ ನಡುವೆಯೂ ನಾವು ಹಿಂಸೆ, ಯುದ್ಧ ಮತ್ತು ನಾಶನದ ಬಗ್ಗೆ ಓದುತ್ತೇವೆ. ಇದು ಹೇಗೆ ಜೀವನದ ಎಲ್ಲಾ ವಿಪತ್ತುಗಳ ನಡುವೆ ನಿರೀಕ್ಷೆಯು ಇನ್ನೂ ಅಸ್ತಿತ್ವದಲ್ಲಿರುವುದನ್ನು ಖಾತ್ರಿ ಪಡಿಸುತ್ತದೆ?

**ಶುಕ್ರವಾರ** **ಮಾರ್ಚ್ 6**

**ಹೆಚ್ಚಿನ ಚಿಂತನೆ :** ದಾನಿಯೇಲ 9:24–27ರಲ್ಲಿ ಹೇಳಿರುವ 70 ವಾರಗಳ ಪ್ರವಾದನೆಯನ್ನು ಕೆಳಗೆ ಕೊಟ್ಟಿರುವ ಚಿತ್ರಪಟವು ವಿವರಿಸುತ್ತದೆ. ಇದು 2300 ಉದಯಾಸ್ತಮಾನಗಳ ಪ್ರವಾದನೆಗೆ ಬಿಗಿಯಲ್ಪಟ್ಟು ಆರಂಭದ ಭಾಗವಾಗಿದೆ (ದಾನಿ 8:14). ನೀವು ಕ್ರಿ.ಪೂ. 457ರಿಂದ 2300 ವರ್ಷಗಳನ್ನು ಲೆಕ್ಕಹಾಕಿದರೆ ನಾವು 1844ನೇ ಇಸವಿಯನ್ನು ಮುಟ್ಟುತ್ತೇವೆ (ಸೊನ್ನೆ ಇಸ್ವಿ ಎಂಬುದು ಇಲ್ಲದ ಕಾರಣ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು). ಹಾಗೆಯೇ ಕ್ರಿ.ಶ. 34ಕ್ಕೆ 1810 ವರ್ಷಗಳನ್ನು ಸೇರಿಸಿದಾಗಲೂ 1844ನೇ ಇಸವಿಯನ್ನು ಮುಟ್ಟುತ್ತೇವೆ. ಇದನ್ನು ದಾನಿಯೇಲ 8:14ರಲ್ಲಿ ದೇವಾಲಯಕ್ಕೆ ಶುದ್ಧೀಕರಣೆಯಾಗುವ ಆರಂಭವನ್ನು 1844ನೇ ಇಸವಿ ಎಂದು ಚಿತ್ರಪಟದಲ್ಲಿ ತೋರಿಸಬಹುದು.

ಹೇಗೆ 1844ರ ದಿನಾಂಕವು ದಾನಿಯೇಲ 7ನೇ ಮತ್ತು 8ನೇ ಅಧ್ಯಾಯಕ್ಕೆ ಸರಿಹೊಂದುತ್ತದೆ ಎಂಬುದನ್ನು ಗಮನಿಸಿರಿ. ದಾನಿಯೇಲ 7ನೇ ಅಧ್ಯಾಯದಲ್ಲಿರುವ ನ್ಯಾಯತೀರ್ಪು 8ನೇ ಅಧ್ಯಾಯದ ಶುದ್ಧೀಕರಣೆ ಎರಡೂ ಒಂದೇಯಾಗಿದೆ (ಕಳೆದ ಎರಡು ವಾರದ ಪಾಠಗಳನ್ನು ನೋಡಿರಿ). ಇದು

1260 ವರ್ಷಗಳ ಹಿಂಸೆಯ ನಂತರ ಘಟಿಸುತ್ತದೆ (ದಾನಿಯೇಲ 7:25). ತನ್ನ ಶಾಶ್ವತ ಯಜ್ಞವನ್ನು ಸ್ಥಾಪಿಸಲು ಎರಡನೆಯ ಸಲ ಬರುವುದಕ್ಕೆ ಮೊದಲೇ ನಡೆಸಬೇಕಾದ ಘಟನೆ ಇದಾಗಿದೆ.




## ಚರ್ಚಿಸಬೇಕಾದ ಪ್ರಶ್ನೆಗಳು

1. 2300 ದಿನಗಳ ಪ್ರವಾದನೆ ಮತ್ತು 70 ವಾರಗಳ ಎರಡೂ ಪ್ರವಾದನೆಯು ಒಂದೇ ಪ್ರವಾದನೆಯಾಗಿದೆ ಎಂದು ವೇದಪಾರಂಗತರು ಹೇಳುತ್ತಾರೆ. ಅವರು ಅದನ್ನು ಏಕೆ ಹೇಳುತ್ತಾರೆ? ಇದರ ದೃಢೀಕರಣಕ್ಕೆ ಯಾವ ಪುರಾವೆಯನ್ನು ಕಾಣುವಿರಿ?

2. ದಾನಿಯೇಲನ ಮಧ್ಯಸ್ಥಿಕೆಯ ಪ್ರಾರ್ಥನೆಯಿಂದ ನಮ್ಮ ಸ್ವಂತ ಮಧ್ಯಸ್ಥಿಕೆಯ ಪ್ರಾರ್ಥನಾ ಜೀವಿತಕ್ಕೆ ಸಹಾಯ ಪಡೆದುಕೊಳ್ಳುವಂತೆ ಏನನ್ನು ಕಲಿಯುತ್ತೇವೆ?

3. ನಮ್ಮ ಪರವಾಗಿ ಕ್ರಿಸ್ತನು ಮಾಡಿದ ಬಲಿದಾನವೊಂದೇ ನಮ್ಮ ನಿರೀಕ್ಷೆಯಾಗಿದೆ. ಇದು ನಮ್ಮನ್ನು ನಾವು ತಗ್ಗಿಸಿಕೊಳ್ಳಲು ಅದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವವರನ್ನಾಗಿಸಲು ಮತ್ತು ಇತರರನ್ನು ಕ್ಷಮಿಸುವವರನ್ನಾಗಿಸಲು ಹೇಗೆ ಸಹಾಯ ಮಾಡುತ್ತದೆ? ಲೂಕ 7:40–47ನೇ ವಚನಗಳ ನಮ್ಮೆಲ್ಲರಿಗೂ ಏನು ಹೇಳುತ್ತದೆ?

4. ದಾನಿಯೇಲನ ಪ್ರಾರ್ಥನೆಗೂ ಆತನ ನಿರೀಕ್ಷೆಗೂ ವಾಕ್ಯವು ಹೇಗೆ ಪ್ರಮುಖವಾಗಿದೆ ನೋಡಿರಿ. ಏನೇ ಆಗಲಿ ದೇಶವು ಕ್ರೂರವಾದ

ಆಕ್ರಮಣದಿಂದ ಸೋಲಿಸಲ್ಪಟ್ಟಿದೆ, ಜನರು ಗಡಿಪಾರು ಮಾಡಲ್ಪಟ್ಟಿದ್ದಾರೆ. ಅವರ ಭೂಮಿಯು ಕೊಳ್ಳೆಯಾಗಿದೆ ಮತ್ತು ಅವರ ರಾಜಧಾನಿ ನಾಶವಾಗಿದೆ. ಇದೆಲ್ಲವನ್ನು ಹೊರತುಪಡಿಸಿ ಜನರು ಹಿಂದಿರುಗಿ ದೇಶಕ್ಕೆ (ಮನೆಗೆ) ಸೇರುತ್ತಾರೆಂದು ದಾನಿಯೇಲನಿಗೆ ನಿರೀಕ್ಷೆ ಇತ್ತು. ದೇವರವಾಕ್ಯದಲ್ಲಿ ಬರೆದಿರುವ ವಾಗ್ದಾನಗಳ ಹೊರತು ಅವನಿಗಿದ್ದ ನಿರೀಕ್ಷೆ ಎಲ್ಲಿಂದ ಬರಲು ಸಾಧ್ಯ? ಆತನ ವಾಕ್ಯದಲ್ಲಿರುವ ವಾಗ್ದಾನಗಳ ಮೇಲೆ ನಾವು ನಿರೀಕ್ಷೆ ಹೊಂದಬಹುದು ಎಂಬುದರ ಬಗ್ಗೆ ಇದು ಏನನ್ನು ಹೇಳುತ್ತದೆ?